ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 181-185
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸಿಕಂದರ್ ಆದಿಲ್ ಶಾಹನ ರಾಜಪ್ರತಿನಿಧಿಗಳು (1672–1686)

**ಅಪ್ಪು ಕೆ. ಜಾಧವ[1] & ಡಾ. ಚಂದ್ರಕಾಂತ ಕೋಳಿಗುಡ್ಡೆ[2]**

[1]ಸಂಶೋಧನಾ ವಿದ್ಯಾರ್ಥಿ, [2]ಸಹಾಯಕ ಪ್ರಾಧ್ಯಾಪಕರು
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ರಾಣಿಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

**Abstract:**

*ಮಧ್ಯಯುಗದ ಭಾರತದ ಚರಿತ್ರೆಯಲ್ಲಿ ಬಿಜಾಪುರದ ಆದಿಲ್ ಶಾಹಿಗಳ ಇತಿಹಾಸ ಬಹಳ ಮಹತ್ವದ ಸ್ಥಾನಪಡೆದಿದೆ. ಆದಿಲ್ ಶಾಹಿ ಸುಲ್ತಾನರು ಕ್ರಿ.ಶ 1486 ರಿಂದ 1686ರವರೆಗೆ 200 ವರ್ಷಗಳ ಕಾಲ ಬಿಜಾಪುರದಲ್ಲಿ ಸ್ವತಂತ್ರ ಆಡಳಿತ ನಡೆಸಿದ್ದಾರೆ. ಈ ಕಾಲಾವಧಿಯಲ್ಲಿ ಸುಮಾರು ಒಂಬತ್ತು ಜನ ಆದಿಲ್ ಶಾಹಿ ಸುಲ್ತಾನರು ಆಳ್ವಿಕೆಮಾಡಿದ್ದಾರೆ. ಅವರಲ್ಲಿ ಆರು ಜನ ಚಿಕ್ಕ ವಯಸ್ಸಿನಲ್ಲಿಯೇ ಅಧಿಕಾರಕ್ಕೆ ಬಂದರು. ರಾಜ್ಯದ ಆಡಳಿತ ನಡೆಸಲಿಕ್ಕೆ ಅವರು ರಾಜ ಪ್ರತಿನಿಧಿಗಳನ್ನು ನೇಮಿಸಿಕೊಳ್ಳುತ್ತಿದ್ದರು. ಅವರಲ್ಲಿ ಕೊನೆಯ ಸುಲ್ತಾನ ಸಿಕಂದರ್ ಆದಿಲ್ ಶಾಹ. ಈತನ ಕಾಲಾವಧಿಯಲ್ಲಿ ನಾಲ್ಕು ಜನ ರಾಜಪ್ರತಿನಿಧಿಗಳು ಆಡಳಿತವನ್ನು ನಡೆಸಿದ್ದಾರೆ. ಅವರುಗಳೆಂದರೆ ಖವಾಸ್ ಖಾನ್, ಬಹಲೋಲ್ ಖಾನ್, ಸಿದ್ದಿ ಮಾಸೂದ್, ಆಗಾಖಾನ್ ಖುಸ್ರೂ. ಪ್ರಸ್ತುತ ಲೇಖನದಲ್ಲಿ ಈ ರಾಜಪ್ರತಿನಿಧಿಗಳ ಕೊಡುಗೆಗಳ ಬಗ್ಗೆ ವಿವರಿಸಲಾಗಿದೆ.*

**Keywords:** *ಬಿಜಾಪುರದ ಆದಿಲ್‌ಶಾಹಿಗಳು, ಬಹಮನಿ ಸುಲ್ತಾನರು, ಮಧ್ಯಕಾಲೀನ ಇತಿಹಾಸ, ಕರ್ನಾಟಕ ಇತಿಹಾಸ.*

## ಪೀಠಿಕೆ

ಆದಿಲ್ ಶಾಹಿ ವಂಶ 1486 ರಿಂದ 1686ರ ವರೆಗೆ ಉತ್ತರ ಕರ್ನಾಟಕ ಮತ್ತು ದಖನ್ನಿನ ಬಹುಭಾಗದಲ್ಲಿ ಆಳ್ವಿಕೆ ನಡೆಸಿದ ರಾಜವಂಶ. ಬಿಜಾಪುರ ಇವರ ರಾಜಧಾನಿಯಾಗಿತ್ತು. ಬಹಮನಿ ರಾಜ್ಯ ನಾಶವಾದ ಬಳಿಕೆ ಹುಟ್ಟಿಕೊಂಡ ಶಾಹಿ ರಾಜ್ಯಗಳಲ್ಲಿ ಇದೂ ಒಂದು. ಯೂಸುಫ್ ಆದಿಲ್ ಶಾ ಈ ವಂಶದ ಸ್ಥಾಪಕರಾಗಿದ್ದಾರೆ.

ಬಿಜಾಪುರದ ಆದಿಲ್‌ಶಾಹಿ ಸುಲ್ತಾನ ಅಲಿ ಆದಿಲ್‌ಶಾಹನು ಪಾರ್ಶ್ವವಾಯುವಿಗೆ ತುತ್ತಾದಾಗ ತನ್ನ ಮಗ ಸಿಕಂದರ್‌ನಿಗೆ ಸಿಂಹಾಸನಾರೋಹಣ ಸಮಾರಂಭವನ್ನು ಏರ್ಪಡಿಸಬೇಕೆಂದು ಪ್ರಧಾನಮಂತ್ರಿ ಅಬ್ದುಲ್ ಮಹಮ್ಮದನಿಗೆ ಆಜ್ಞೆ ಮಾಡಿದನು. ಸಿಕಂದರ್ ಐದು ವರ್ಷದ ಮಗುವಾಗಿದ್ದರಿಂದ ಅಬ್ದುಲ್ ಮಹಮ್ಮದನೆ ಆಡಳಿತಗಾರನಾಗಬೇಕೆಂದು ಆದೇಶ ಮಾಡಿದನು. ಅವನ ಆದೇಶದಂತೆ ಮಗು ಸಿಕಂದರ್‌ನನ್ನು ಅಲಿ ಆದಿಲ್ ಶಾಹನು ಮರಣ ಹೊಂದಿದ ದಿನವೇ (ನವೆಂಬರ್ 24, 1672) ಪಟ್ಟಾಭಿಷೇಕ ಮಾಡಿದನು. ಈ ಅವಧಿಯಲ್ಲಿ ಬಿಜಾಪುರದ ಪರಿಸ್ಥಿತಿ ತುಂಬ ಹದಗೆಟ್ಟಿತ್ತು. ಮೊಘಲರು ಮತ್ತು ಮರಾಠರು ಬಿಜಾಪುರದ ರಾಜ್ಯದ ಅಸ್ತಿತ್ವವನ್ನು ಅಲುಗಾಡಿಸುತ್ತಿದ್ದರು. ಹಾಗೂ ಮೊಘಲರಿಗೆ ಕೊಡುತ್ತಿದ್ದ ಕಪ್ಪದಿಂದ ರಾಜ್ಯದ

**Please cite this article as:** ಅಪ್ಪು ಕೆ. ಜಾಧವ & ಚಂದ್ರಕಾಂತ ಕೋಳಿಗುಡ್ಡೆ. (2023). ಸಿಕಂದರ್ ಆದಿಲ್ ಶಾಹನ ರಾಜಪ್ರತಿನಿಧಿಗಳು (1672–1686). *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್.* 2(2), 181–185.

ಭಂಡಾರವು ಖಾಲಿಯಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಪ್ರಧಾನ ಮಂತ್ರಿ ಅಬ್ದುಲ್ ಮಹಮ್ಮದ್ ಖವಾಸ್ ಖಾನ್‌ನನ್ನು ರಾಜಪ್ರತಿನಿದಿಯಾಗಿ ನೇಮಿಸಿದನು.

**ಖವಾಸ್‌ಖಾನ (1672–1676)**

ಖವಾಸಖಾನನು 1672 ರಿಂದ 1676 ವರೆಗೆ ಆಡಳಿತ ನಡೆಸಿದನು. ರಾಜ್ಯದ ಸೂತ್ರಗಳನ್ನು ತನ್ನ ಕೈಯಲ್ಲಿಟ್ಟುಕೊಂಡು ಅಧಿಕಾರ ನಡೆಸಿದನು. ಇದರಿಂದ ಬೇಸತ್ತ ಅಬ್ದುಲ್ ಮಹಮ್ಮದ್‌ನು ನಿರಾಸೆ ಮತ್ತು ಅಪಮಾನದಿಂದ ತನ್ನ ಜಹಗೀರ್‌ಗೆ ಹೊರಟು ಹೋದನು. ಇದರಿಂದ ಕುಪಿತನಾದ ಇವನ ಮಗ ಅಬ್ದುಲ್ ರಹೀಮ್ ಮತ್ತು ಬಹಲೋಲ ಖಾನನ ಮಗ ಅಬ್ದುಲ್ ಕರೀಮ್ ಬಹಲೋಲ ಖಾನ್ ಖವಾಸಖಾನನ ಮೇಲೆ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದರು.

**ಉಮರಾಣಿ ಯುದ್ದ**

ಸಿಕಂದರನು ಸಿಂಹಾಸನವನ್ನೇರಿದ ವರ್ಷವೆ ಶಿವಾಜಿಯು ಆದಿಲ್ ಶಾಹನ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ತನ್ನ ಸೈನ್ಯವನ್ನು ಕಳುಹಿಸಿದನು. ಪ್ರತಿಯಾಗಿ ಖವಾಸ ಖಾನನು ಇದನ್ನು ತಡೆಯಲು ಅಬ್ದುಲ್ ಕರೀಮ್ ಬಹಲೋಲ ಖಾನನನ್ನು ನೇಮಿಸಿದನು. ಅವನ ಆದೇಶದಂತೆ ಅಬ್ದುಲ್ ಕರೀಮ್ ಬಹೋಲ್‌ಖಾನನು ಉಮರಾಣಿ ಹತ್ತಿರ ಹೋಗಿ ಅಲ್ಲಿ ಶಿವಾಜಿಯು ಸುಮಾರು ಹದಿನೈದು ಸಾವಿರ ಶಸ್ತ್ರಸಜ್ಜಿತ ಸೈನಿಕರನ್ನು ಧೈರ್ಯದಿಂದ ಎದುರಿಸಿದನು. ಬಹಲೋಲ ಖಾನನ ದಂಡಿನಲ್ಲಿ ಬಾಣಗಳ ರಾಶಿ ಸತತವಾಗಿ ಬೀಳುತ್ತಿದ್ದಂತೆಯೇ ಶಿವಾಜಿಯ ಕಡೆಯ ಸ್ಯನ್ಯದ ತಲೆಗಳು ಉರುಳಿ ಶವಗಳ ಹಾಸಿಗೆಯಾಯಿತು. ಇದರಿಂದಾಗಿ ಶಿವಾಜಿ ಸೈನ್ಯವು ಹಿಮ್ಮೆಟ್ಟಿತು.

ಶಿವಾಜಿಯಿಂದ ಬಿಜಾಪುರ ರಾಜ್ಯವನ್ನು ಉಳಿಸುವ ಸಲುವಾಗಿ ಖವಾಸ ಖಾನನು ಔರಂಗಜೇಬನೂಡನೆ ರಾಜಕೀಯ ಸಂಬಂಧವನ್ನು ಏರ್ಪಡಿಸಲು ಮುಂದಾಗುತ್ತಾನೆ. ಆಗ ಮೊಘಲ ರಾಯಭಾರಿಕೆಯನ್ನು ಹಿರಿಯ ಮುತ್ಸದ್ದಿ ಬುದ್ಧಿವಂತ ಹಕೀಮ ಷಮ್ಸುದ್ದೀನನಿಗೆ ವಹಿಸಿದ್ದನು. ತನ್ನ ಜಾಣ್ಮೆಯಿಂದ ಆದಿಲ್‌ಶಾಹ ಮತ್ತು ಮೊಘಲರ ಸಖ್ಯ ಬೆಳೆಸಬೇಕು ಹಾಗೆ ಮಾಡಿದರೆ ಆದಿಲ್‌ಶಾಹನ ರಾಜ್ಯವು ಶತ್ರುಭಯದಿಂದ ಸುರಕ್ಷಿತವಾಗಿರುತ್ತದೆ ಎಂಬುದಾಗಿ ಹೇಳಿದ್ದನು. ಹಕೀಮ್ ಷಮಸುದ್ದೀನನ ಪ್ರಯತ್ನದಿಂದಾಗಿ ಉಭಯತ್ರರೂ ಮಿತ್ರರಾದರು. ಅವರ ಸ್ನೇಹದ ಒಪ್ಪಂದದಂತೆ ಆದಿಲ್ ಶಾಹಿ ರಾಜಕುಮಾರಿ ಶಹರಬಾನು ಬೇಗಂ ಮದುವೆಯನ್ನು ಮೊಘಲ್ ರಾಜಕುಮಾರ ಮುಅಜಂನಿಗೆ ವಿವಾಹ ಮಾಡಿಕೊಡುವ ಪ್ರಸ್ತಾಪ ಮಾಡಿದನು. ಶಿವಾಜಿಯ ವಿರುದ್ಧವಾಗಿ ಮೊಘಲರೊಂದಿಗೆ ಬಿಜಾಪುರವು ಸಕ್ರಿಯ ಸಹಕಾರ ನೀಡುವುದಾಗಿ ಒಪ್ಪಿಕೊಂಡನು. ಇದಕ್ಕೆ ಪ್ರತಿಯಾಗಿ ಔರಂಗಜೇಬ ಬಾದಶಾಹನು ಆದಿಲ್ ಶಾಹನಿಂದ ಪ್ರತಿವರ್ಷ ಪಡೆಯುತ್ತಿದ್ದ ಕಂದಾಯವನ್ನು ರದ್ದುಗೊಳಿಸಿಸಬೇಕು. ಸಿಕಂದರನಿಗೆ 'ಶಾಹ' ಪದವಿಯನ್ನು ನೀಡಬೇಕು ಎಂದು ಪತ್ರ ಬರೆದನು. ವಿನಂತಿಪತ್ರದಲ್ಲಿ ಬರೆದ ಕರಾರುಗಳನೆಲ್ಲ ಔರಂಗಜೇಬ ಬಾದಶಾಹನು ಒಪ್ಪಿಕೊಂಡನು.

ಗರ್ವದಿಂದ ಮೆರೆಯುತ್ತಿದ್ದ ಶಿವಾಜಿಯನ್ನು ನಿರ್ಮೂಲನೆ ಮಾಡಲು ಪ್ರತಿವರ್ಷ ನೀಡುತ್ತಿದ್ದ ಕಪ್ಪಕಾಣಿಕಯನ್ನು ರದ್ದುಮಾಡಿದನು ಹಾಗೂ ಔರಂಗಜೇಬ ಬಾದಶಾಹನು ಖವಾಸ ಖಾನನಿಗೆ 'ನವಾಜಖಾನ್' ಎಂಬ ಪದವಿ ನೀಡಿದನು. ರಾಜ್ಯದ ಕಲ್ಯಾಣದಲ್ಲಿ ಅತ್ಯಂತ ಆಶಾದಾಯಕ ದಿನವಾಗಿತ್ತು. ಈ ಬೆಳವಣಿಗೆಗಳು ಬಹಲೋಲ್ ಖಾನನಿಗೆ ತಿಳಿದಿರಲ್ಲಿಲ. ಇದರಿಂದಾಗಿ ಬಹಲೋಲ್ ಖಾನ್ ರಾಜಪ್ರತಿನಿಧಿ ಖವಾಸ್ ಖಾನನನ್ನು ಬಂಧಿಸಿ ಬಂಕಾಪುರ ಕೋಟೆಯಲ್ಲಿ ಸೆರೆಯಲ್ಲಿಟ್ಟನು. ಖವಾಸ್ ಖಾನನ ಪರವಾಗಿದ್ದ ಅನೇಕ ನೋಬಲ್ಲರು ಭೀತಿಯಿಂದ ಮೊಘಲ್ ಶಿಬಿರ ಹಾಗೂ ಗೋಲ್ಕೊಂಡಕ್ಕೆ ಓಡಿಹೋದರು. ಈಗ ಬಹಲೋಲ್ ಖಾನ್ ರೀಜೆಂಟ್ ಆದನು. ಇದರಿಂದಾಗಿ ಇವನ ವಿರೋಧಿಗಳು ದಂಗೆಯೆದ್ದರು. ಅಫ್ಘನ್ನರು ಮತ್ತು ಅಫ್ಘನೇತರರ ನಡುವಣ ದ್ವೇಷ ಮತ್ತೆ ಕೆರಳಿತು.

ಬಹಲೋಲ್ ಖಾನನು, ಖವಾಸ್‌ಖಾನನೇ ಎಲ್ಲಾ ಕಷ್ಟಗಳಿಗೆ ಮೂಲಕಾರಣನೆಂದು ಆರೋಪ ಹೊರಿಸಿ 1676ರಲ್ಲಿ ಅವನನ್ನು ಮರಣದಂಡನೆಗೊಳಪಡಿಸಿದನು. ಬಿಜಾಪುರದ ಬಸ್ ನಿಲ್ದಾಣದಿಂದ ಪಶ್ಚಿಮಕ್ಕೆ ಅನತಿ ದೂರದಲ್ಲಿ ಖವಾಸ್ ಖಾನನ ಗೋರಿ ಇದೆ. ಇದನ್ನು 1686ರಲ್ಲಿ ಔರಂಗಜೇಬನು ಕಟ್ಟಿಸಿದನು. ಇಲ್ಲಿ ಖವಾಸ್ ಖಾನ್ ಮತ್ತು ಆತನ ಹೆಂಡತಿ, ಮಕ್ಕಳು ಹಾಗೂ ತಾಯಿಯ ಸಮಾಧಿಗಳಿವೆ.

**ಬಹಲೋಲ ಖಾನ್ (1675–1677)**

ಖವಾಸ ಖಾನನ ಮರಣನಂತರ ಸರ್ವಾಧಿಕಾರಿ ಅಬ್ದುಲ್ ಕರೀಮ್ ಬಹಲೋಲಖಾನನು ತನ್ನ ಆಪ್ತರಾದ ಪಠಾಣ ಜನರನ್ನು ಕೆಲಸದ ಮೇಲೆ ನೇಮಿಸಿದನು ಮತ್ತು ತಮ್ಮ ಜನರಿಗೆ ಜಹಗೀರ್‌ಗಳನ್ನು ನೀಡಿ ಎಲ್ಲಾ ರೀತಿಯ ಅಧಿಕಾರಗಳನ್ನು ನೀಡಿದನು. ಇದೇ ಸಂದರ್ಭದಲ್ಲಿ ದಖನಿ ಜನರನ್ನು ಕೆಲಸದಿಂದ ತೆಗೆದು ಅವರ ಜಹಗೀರುಗಳನ್ನು ಹಿಂಪಡೆದನು. ಇದರಿಂದ ಅನೇಕ ಜನರಂತೆ ಸೈಯದ್ ಮಖದೂಮ ಷರ್ಜಾಖಾನನು ಕೊಡ ಬಹಳ ತೊಂದರೆ ಅನುಭವಿಸುತ್ತ ಮನದಲ್ಲೇ ಹೊಂಚು ಹಾಕುತ್ತಿದನು. ದಿನದಿಂದ ದಿನಕ್ಕೆ ಉಭಯತ್ರರಲ್ಲಿ ವಿರಸ ಬಹಿರಂಗವಾಗಿ ಇಬ್ಬರ ಮಧ್ಯ ಯುದ್ದವೇ ನಡೆಯಿತು. ಷರ್ಜಾಖಾನನು ನವಾಬ ಬಹದ್ದೂರ ಖಾನನ ಜೊತೆಗೆ ಒಪ್ಪಂದ ಮಾಡಿಕೊಳ್ಳಬೇಕೆಂದು ಬಯಸಿದನು ಮತ್ತು ಈ ಸಂಕಟ ನಿವಾರಣೆಯ ಕುರಿತು ಆತನ ಸಲಹೆಯನ್ನು ಕೇಳಿದನು. ಸಂದಲಾಪುರದ ಹತ್ತಿರ ಬಹದ್ದೂರ ಖಾನನನ್ನು ಬೇಟಿಯಾದನು. ಅಬ್ದುಲ್ ಕರೀಮ್ ಬಹಲೋಲಖಾನನ ಅಗೌರವದ ನಡತೆ ಹಾಗೂ ಸೊಕ್ಕಿನ ಕುರಿತು ಚರ್ಚಿಸಿದರು. ಬಹಲೋಲನ ವರ್ತನೆಯಿಂದ ಕೆರಳಿದ ಬಹದ್ದೂರ ಖಾನನು ದಖನಿ ಪಕ್ಷವನ್ನು ಆಫ್ಘನರ ಮೇಲೆ ಎತ್ತಿ ಕಟ್ಟಿ ಆಟವನ್ನು ಮೊದಲಿಟ್ಟನು. ರಾಜ್ಯದ ಆಂತರಿಕ ವವ್ಯಹಾರಗಳಲ್ಲಿ ಹೀಗೆ ಮೊಘಲರು ಅತಿಕ್ರಮ ಪ್ರವೇಶ ಮಾಡುವುದು ಬಹುಲೋಲನಿಗೆ ತೀವ್ರ ಅಸಮಾಧಾನವನ್ನುಂಟು ಮಾಡಿತು. ಶಿವಾಜಿ ಇದೇ ಒಳ್ಳೆಯ ಸಮಯವೆಂದರಿತು ಆದಿಲ್‌ಶಾಹಿ ಪ್ರದೇಶಗಳನ್ನುವಶಪಡಿಸಿಕೊಂಡನು.

ಸಿದ್ದಿ ಮಾಸೂದಖಾನನು ತನ್ನ ಧಣಿ ಆದಿಲ್ ಶಾಹನ ರಾಜ್ಯ ಹಾಳಾಗುತ್ತಿದ್ದದ್ದು, ಪಠಾಣ ಜನರ ಪ್ರಾಬಲ್ಯ ಹಾಗೂ ರಾಜ ಸಿಕಂದರ್ ಬಾದಶಾಹನ ಬಳಿ ಯಾವುದೇ ಅಧಿಕಾರವಿಲ್ಲ ಎಂದು ಚಿಂತಿಸಿ ಪಠಾಣರಿಂದ ತೊಂದರೆಗೀಡಾದ ಜನರನ್ನು ಒಂದೆಡೆ ಸೇರಿಸಿ ಸೈಯದ್ ಮಖದುಮ ಷರ್ಜಾಖಾನ, ಕುತುಬ್‌ಶಾಹನಾದ ಅಬ್ದುಲ್ ಹಸನ್ ತಾನಾಶಾಹಾನ ದರ್ಬಾರಿಗೆ ಹೋಗಿ ಆದಿಲ್‌ಶಾಹಿ ರಾಜ್ಯ ತುಂಬ ಹಾಳಾಗುತ್ತಿದೆ. ಅದರ ಬಗ್ಗೆ ವಿಚಾರಿಸಬೇಕೆಂದು ತಾನಾಶಾಹನನ್ನು ಕೇಳಿದನು. ಮೊದಲಿಂದಲೂ ಆದಿಲ್ ಶಾಹಿ ಹಾಗೂ ಕುತುಬ್ ಶಾಹಿಗಳ ಮಧ್ಯ ಪರಸ್ಪರ ಸಹಾಯ ಮಾಡುವ ಸಂಪ್ರದಾಯ ಇದ್ದೇ ಇತ್ತು. ನಿಜವಾಗಿ ನೋಡಿದರೆ ಎರಡೂ ರಾಜ್ಯಗಳಲ್ಲಿ ಭಿನ್ನತೆ ಎನೂ ಇರದೇ ಒಂದೇ ರೀತಿಯದ್ದಾಗಿದ್ದವು.

ಆದಿಲ್ ಶಾಹಿ ರಾಜ್ಯದ ಸೂತ್ರಗಳು ಪಠಾಣರ ಕೈಯಲ್ಲಿದ್ದುದನ್ನು ಮನಗಂಡ ಕುತುಬ್ ಶಾಹನಾದ ಅಬ್ದುಲ್ ಹಸನ್ ತಾನಾಶಾಹಾನು; ಬಿಜಾಪುರದ ಆಡಳಿತವನ್ನು ಮಾಸೂದ ಖಾನನಿಗೆ ನೀಡುವ ಕುರಿತು ಚರ್ಚಿಸಲು ಬಹಲೋಲಖಾನನಿಗೆ ಆಮಂತ್ರಣ ನೀಡಿದನು. ಕುತುಬ್ ಶಾಹ ಆತನಿಗೆ ರಾಜ್ಯದ ಕಲ್ಯಾಣಕ್ಕಾಗಿ ನೀತಿ ಭೋದನೆ ಮಾಡಿದನು. ತಮ್ಮ ತಮ್ಮಲ್ಲಿಯ ವಿರಸ ಜಗಳವನ್ನು ಮರೆತು ರಾಜ್ಯ ಸಂರಕ್ಷಣೆ ಮಾಡುವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದನು. ಬಹಲೋಲಖಾನನು ಕುತುಬ್ ಶಾಹನ ಮಾತಿಗೆ ಸಮ್ಮತಿಸಿ ಇಬ್ಬರೂ ಬಿಜಾಪುರದ ಕಡೆ ಪ್ರಯಾಣ ಬೆಳೆಸಿದರು. ಆದರೆ ರಸ್ತೆ ಮಧ್ಯೆ ಬಹಲೋಲಖಾನನ ಆರೋಗ್ಯದಲ್ಲಿ ಏರುಪೇರಾಗಿ ಡಿಸೆಂಬರ್ 23, 1677 ರಂದು ಮರಣ ಹೊಂದಿದನು.

**ಸಿದ್ದಿಮಾಸೂದ್ ಖಾನ್ (1677–1683)**

ಬಹಲೋಲ್ ಖಾನನ ಮರಣದ ನಂತರ ಸಿದ್ದಿಮಾಸೂದ್ ಖಾನ್ ಪೆಬ್ರವರಿ 2, 1678 ರಂದು

ರಾಜಪ್ರತಿನಿಧಿಯಾಗಿ ಅಧಿಕಾರವಹಿಸಿಕೊಂಡನು. ನಂತರ ಕುತುಬ್ ಶಾಹನಿಗೆ ಪತ್ರಬರೆದು ಕರಾರಿನಂತೆ ಹಣ ಕಳುಹಿಸಲು ವಿನಂತಿಸಿಕೊಳ್ಳುತ್ತಿದ್ದನು. ಆದರೆ ಕುತುಬ್ ಶಾಹನ ಕಡೆಯಿಂದ ಯಾವುದೇ ಉತ್ತರ ಬರುತ್ತಿರಲಿಲ್ಲ. ಇದರಿಂದ ಕುತುಬ್ ಶಾಹ ಮತ್ತು ಮಾಸೂದ್‌ಖಾನನ ಮಧ್ಯ ವಿರಸ ಉಂಟಾಯಿತು. ಸಿದ್ದಿ ಮಾಸೂದ್‌ನು ಬಂದಿದ್ದರಿಂದ ರಾಜ್ಯದ ಕೆಲಸಗಳಲ್ಲಿ ಸುಧಾರಣೆಯಾಗಬಹುದು ಎಂದು ಎಲ್ಲರೂ ಭಾವಿಸಿದ್ದರು. ಪಠಾಣ ಜನರು ತಮಗೆ ಬರಬೇಕಾದ ವೇತನದ ಹಣಕ್ಕಾಗಿ ಮಾಸೂದ ಖಾನನಿಗೆ ಕಿರುಕುಳ ಕೊಡಹತ್ತಿದ್ದರು. ರಾಜಧಾನಿಯಲ್ಲಿ ಒಂದು ರೀತಿಯ ಭಯದ ವಾತಾವರಣವನ್ನು ನಿರ್ಮಿಸಿದರು. ದಾರಿಯಲ್ಲಿ ಸಿಕ್ಕವರನ್ನು ಕೊಳ್ಳೆ ಹೊಡೆದು ಸುಲಿಗೆ ಮಾಡಿದರು. ಮನೆ–ಮಂದಿರ ಅಂಗಡಿ–ಮುಗ್ಗಟ್ಟುಗಳನ್ನು ಹೊಕ್ಕು ಸುಲಿಗೆ ಮಾಡಿದರು. ಅವರಿಂದ ನಗರದ ಯಾರೂ ಸುರಕ್ಷಿತವಾಗಿ ಉಳಿಯಲಿಲ್ಲ. ಇದರಿಂದಾಗಿ ಬಹುತೇಕ ಜನರು ರಾಜಧಾನಿಯನ್ನು ತೊರೆದು ಹಳ್ಳಿಗಾಡಿನತ್ತ ಹೋದರು.

ಕೊನೆಗೆ ಮಾಸೂದನು ಕಠಿಣ ಪರಿಸ್ಥಿತಿಯನ್ನು ನಿಭಾಯಿಸಲು ರಾಜ್ಯದ ಕೋಶಾಗಾರದಿಂದ ಹಣವನ್ನು ಕೊಡಲಿಕ್ಕೆ ಮುಂದಾದನು ಆದರೆ ಅಷ್ಟೊಂದು ಹಣ ಕೋಶಾಗಾರದಲ್ಲಿ ಇರಲಿಲ್ಲ. ಬಿಜಾಪುರಕ್ಕೆ ಬರುತ್ತಿದ್ದ ಮಾಸೂದನ ಕುಟುಂಬವನ್ನು ಪಠಾಣರು ಬಂಧಿಸಿದರು. ಸಿಕಂದರ್ ಆದಿಲ್‌ಶಾಹನ ಸಹೋದರಿಯ ಮಧ್ಯ ಪ್ರವೇಶದಿಂದ ಬಿಡುಗಡೆ ಮಾಡಲಾಯಿತು ಮತ್ತು ಕೆಲಕಾಲ ಬಂಡಾಯ ಸ್ಥಗಿತಗೊಳಿಸಿದರು. ಈ ಅವಕಾಶ ಉಪಯೋಗಿಸಿಕೊಂಡ ಸಿದ್ದಿ ಮಾಸೂದನು; ಬಿಜಾಪುರದಲ್ಲಿ ಆಡಳಿತವನ್ನು ಸುಗಮಗೊಳಿಸಲು ಶಿವಾಜಿಯೊಂದಿಗೆ ಒಪ್ಪಂದ ಮಾಡಿಕೊಂಡನು. ಮೊಘಲರ ಸಂಬಂಧವನ್ನು ಕಡಿದುಕೊಂಡರು. ಇತ್ತ ಮಾಸೂದ ಖಾನನಿಗೆ ಮೊಘಲರಿಂದ ಎಚ್ಚರಿಕೆಯ ಪತ್ರಗಳು ಬರತೊಡಗಿದವು. ಮೊದಲೆ ನಿರ್ಧರಿಸಿದಂತೆ ಸಿಕಂದರ್ ಆದಿಲ್‌ಶಾಹನ ಅಕ್ಕನನ್ನು ಔರಂಗಜೇಬನ ಮಗನೊಂದಿಗೆ ವಿವಾಹ ನಿಶ್ಚಯಿಸಲಾಗಿತ್ತು. ಅದನ್ನು ನೆರವೇರಿಸಿ ಕೊಡಬೇಕು ಎಂದು ಪತ್ರಗಳು ಬರತೊಡಗಿದವು. ಜುಲೈ 1, 1679 ರಂದು ರಾಜಕುಮಾರಿಯನ್ನು ದಿಲ್ಲಿಗೆ ಕಳುಹಿಸಿದರು.

ಸಿದ್ದಿ ಮಾಸೂದ್ ಖಾನನು ಸಿಕಂದರ್ ಆದಿಲ್‌ಶಾಹ ಬಾದಶಾಹನ ಕಾಲದಲ್ಲಿ ರಾಜ್ಯದ ವ್ಯವಸ್ಥೆಯನ್ನು ಸರಿಯಾಗಿ ಇಡುವ ವಿಷಯದಲ್ಲಿ ಬಹಳ ಚಿಂತೆಯಲ್ಲಿ ಬಿದ್ದು ತುಂಬಾ ಪ್ರಯತ್ನ ಮಾಡಿದನು. ಆದರೆ ಅವನ ಪ್ರಯತ್ನಗಳೆಲ್ಲ ವ್ಯರ್ಥವಾದವು. ಬಾದಶಾಹನಿಂದ ಸಾಮಾನ್ಯ ಪ್ರಜೆಗಳು, ರೈತರು, ಜನಸಾಮಾನ್ಯರು, ಖಾಸಾ ಜನರೂ ಒಂದು ದಿನ ಕೂಡ ನೆಮ್ಮದಿಯಿಂದ ಒಂದೊತ್ತು ಊಟ–ನಿದರೆ ಮಾಡುತ್ತಿರಲಿಲ್ಲ. ಹೀಗಾಗಿ ಬಿಜಾಪುರ ಕೋಟೆಯಲ್ಲಿ ಎಲ್ಲರಿಂದಲೂ ಕೆಡಾಗುವುದಕ್ಕಿಂತ ಅದೋನಿಯ ಕೋಟೆಯನ್ನು ರಕ್ಷಣೆ ಮಾಡುತ್ತ ಒಂದೆಡೆ ಕುಳಿತುಕೊಳ್ಳುವುದು ಒಳ್ಳೆಯದು ಎಂದು ಮಾಸೂದ್ ಖಾನನು ತಿಳಿದು ವಾಪಸ್ಸು ಹೋಗಲು ನಿರ್ಧರಿಸಿದನು.

ಆದರೆ ಸಿಕಂದರ್ ಬಾದಶಾಹನು ಇದಕ್ಕೆ ಒಪ್ಪಲಿಲ್ಲ. ಆದರೆ ಮಾಸೂದ್ ಖಾನನು ಕುರಾನ್‌ಷರಿಫ್ ಗ್ರಂಥದ ಮೇಲೆ ಶಪಥವನ್ನೂ ಮತ್ತೆ ವಾಪಸ್ಸು ಬರುವೆ ಎಂದು ಹೇಳಿ ನವೆಂಬರ್ 21, 1683 ರಂದು ಬಿಜಾಪುರದಿಂದ ಹೊರಟನು. ಸಿಕಂದರನು ಅವನ ಸ್ಥಳದಲ್ಲಿ ಆಗಾಖಾನ ಖುಸ್ರೋನನ್ನು ನೇಮಿಸಿದನು. ಆದರೆ ಅವನು ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ತೀರಿಕೊಂಡನು. ಹಿಗೇ ಬಿಜಾಪುರದ ಕೊನೆಯ ಸುಲ್ತಾನ ಸಿಕಂದರ ಆದಿಲ್‌ಶಾಹನ ಕಾಲದಲ್ಲಿ ನಾಲ್ಕು ಜನ ರಾಜಪ್ರತಿನಿಧಿಗಳು ಆಳ್ವಿಕೆಮಾಡಿದರು. ಕಿರಿಯ ವಯಸ್ಸಿನಲ್ಲಿ ಅಧಿಕಾರಕ್ಕೆ ಬಂದ ಸಿಕಂದರ ಆದಿಲ್‌ಶಾಹನು ಆಡಳಿತ ನಡೆಸಲಿಕ್ಕೆ ವಿಫಲನಾದನು. 1686ರಲ್ಲಿ ಔರಂಗಜೇಬನು ಬಿಜಾಪುರದ ಮೇಲೆ ದಾಳಿ ಮಾಡಿ ತನ್ನ ಸಾಮ್ರಾಜ್ಯದಲ್ಲಿ ಸೇರಿಸಿಕೊಂಡನು.

**ಪರಾಮರ್ಶನ/ಆಕರ ಗ್ರಂಥಗಳು**

- *ಬಾಂಬೆ ಮತ್ತು ಬಿಜಾಪುರ ಜಿಲ್ಲಾ ಗ್ಯಾಸೆಟಿಯರ್–1884–1896.* ಕರ್ನಾಟಕ ಸರಕಾರ.
- ಕೃಷ್ಣಕೂಲ್ಹಾರ ಕುಲಕರ್ಣಿ. (2002). *ಆದಿಲ್ ಶಾಹಿ ಅರಸರ ಚರಿತ್ರೆ.* ಸಿಕ್ಯಾಬ ಆದಿಲ ಶಾಹಿ ಅದ್ಯಯನ ಸಂಸ್ಥೆ. ನವರಸಪುರ ಮಹಾವಿದ್ಯಾಲಯ ಸಂಕೀರ್ಣ.
- ಕೃಷ್ಣ ಕೊಲ್ಹಾರ ಕುಲಕರ್ಣಿ. (ಅನು.) (2014). *ಮುಲ್ಲಾ ನುಸ್ರತಿ ವಿರಚಿತ–ಅಲಿನಾಮಾ ತಾರೀಖೇ ಸಿಕಂದರಿ.* ವಚನ ಪಿತಾಮಹ ಡಾ.ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ.
- ಷೇಕ ಅಲಿ ಬಿ. (2018). *ಕರ್ನಾಟಕ ಚರಿತ್ರೆ ಸಂಪುಟ–4.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- Fukazawa, H. (1963). A study of the Local Administration of Adilshahi Sultanate (A.D. 1489-1686). *Hitotsubashi Journal of Economics*, *3*(2), 37–67. https://doi.org/10.15057/8098
- Pearson, M. N. (1976). History of Medieval Deccan, 1295–1724. Volume II: Mainly Cultural Aspects. Edited By H. K. Sherwani and P. M. Joshi. Andhra Pradesh: Government of Andhra Pradesh, 1974. xxx, 627 pp. Notes, Plates, Index, n.p.l. *The Journal of Asian Studies*, *36*(01), 161–162.
- Cousens, H. (1977). *Bijapur and its architectural remains*. https://ci.nii.ac.jp/ncid/BA29126365